**ದಿನಾಂಕಃ 29-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ  ಹೆಚ್ ಎಂ ವಕೀಲರಿಂದಃ-**

100 ಗ್ರಾಂ ಚಿನ್ನವನ್ನು ಆರೋಪಿತರಿಗೆ ನೀಡಿದ್ದೇವೆಂದು ತಿಳಿಸಿದ್ದೀರಿ, ಏನೇನು ಒಡವೆಗಳನ್ನು ಕೊಟ್ಟಿದ್ದೀರಿ ಎಂದರೆ ಆರೋಪಿ 1 ರವರಿಗೆ 30 ಗ್ರಾಂ ಚೈನು, 2 ಉಂಗುರ, ಚಾ.ಸಾ. 1 ರವರಿಗೆ ಮಾಂಗಲ್ಯದ ಸರ, 15 ಗ್ರಾಂ ಓಲೆ ಜುಮುಖಿಯನ್ನು ಕೊಟ್ಟಿದ್ದೇವೆಂದು ನುಡಿಯುತ್ತಾರೆ.  ಈ ಚಿನ್ನದ ಒಡವೆಗಳನ್ನು ಮಾಡಿಸಿದ್ದಕ್ಕೆ ಯಾವುದೇ ದಾಖಲೆ ಇಲ್ಲ.  ನಂತರ ಸಾಕ್ಷಿ ಮುಂದುವರೆದು, ದಾಖಲೆಯನ್ನು ನೀಡಿದ್ದೇವೆಂದು ನುಡಿಯುತ್ತಾರೆ.  ಈ ಪ್ರಕರಣ ದಾಖಲಾದ ಸಂದರ್ಭದಲ್ಲಿ ನಾವು ದಾಖಲೆಯನ್ನು ತಂದಿರುತ್ತೇವೆ.  ನಾವು ಒಡವೆ ಮಾಡಿಸಿದ 10 ವರ್ಷಗಳ ನಂತರ ಸದರೀ ದಾಖಲೆಯನ್ನು ತಂದಿರುತ್ತೇವೆ.  50 ಸಾವಿರ ನಗದನ್ನು ಮದುವೆಯ ಮಾತುಕತೆಯ ಸಂದರ್ಬದಲ್ಲಿ ಆರೋಪಿತರಿಗೆ ನೀಡಿರುತ್ತೇವೆ.  ಮದುವೆಯ ನಂತರ ಆರೋಪಿತರು ಚಾ.ಸಾ. 1 ರವರಿಗೆ ಕಿರುಕುಳ ನೀಡಿದ ಕಾರಣ ಮತ್ತೊಮ್ಮೆ 50 ಸಾವಿರ ರೂ. ಹಣವನ್ನು ನೀಡಿರುತ್ತೇವೆ.  ಸದರೀ ಹಣವನ್ನು ಮದುವೆಯಾದ 4 ವರ್ಷಗಳ ನಂತರ ನೀಡಿರುತ್ತೇವೆ.  ನಿಮ್ಮ ಬಳಿ 50 ಸಾವಿರ ರೂ. ಹಣ ಇರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನಾವು ಬೇರೆಯವರ ಬಳಿ ಸಾಲ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ.  ಮದುವೆಯ ಸಂದರ್ಭದಲ್ಲಿ ನೀಡಿದ 50 ಸಾವಿರ ರೂ. ಹಣವನ್ನು ನಾವು ಬೇರೆಯವರಿಂದ ಸಾಲ ಮಾಡಿ ಪಡೆದಿಲ್ಲ.  2 ನೇ ಬಾರಿ 50 ಸಾವಿರ ರೂ. ಹಣವನ್ನು ನೀಡಿದಾಗ ಯಾರಿಂದ ಸಾಲ ಮಾಡಿದ್ದೀರಿ ಎಂದರ ಸಾಕ್ಷಿ ಅದನ್ನು ಹೇಳಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.  ಆರೋಪಿತರು ಕಿರುಕುಳ ನೀಡಿ 50 ಸಾವಿರ ರೂ. ಹಣವನ್ನು ಪಡೆದಾಗ ಪೋಲೀಸರಿಗೆ ದೂರು ನೀಡಿದ್ದೀರಾ ಎಂದರ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.

ನಿಮ್ಮ ಜಮೀನಿನಿಂದ ಬರುವ ವರಮಾನ ನಿಮ್ಮ ಊಟ ಬಟ್ಟೆಗೆ ಸಾಕಾಗುವುದಿಲ್ಲ ಎಂದರೆ ಸರಿಯಲ್ಲ.  ಆರೋಪಿ 2 ರವರು ಪಿ ಎಲ್ ಡಿ ಬ್ಯಾಂಕ್ ನಲ್ಲಿ ನೌಕರನಾಗಿರುವ ಕಾರಣ ಮದುವೆಯ ಎಲ್ಲಾ ಖರ್ಚನ್ನು ಅವರೇ ಭರಿಸಿ ಮದುವೆ ಮಾಡಿದ್ದಾರೆಂದರೆ ಸರಿಯಲ್ಲ. ಘಟನೆಯಾದ 3-4 ವರ್ಷಗಳ ಹಿಂದೆಯೇ ಆರೋಪಿ 2 ಮತ್ತು 3 ರವರು ಮಂಡ್ಯದಲ್ಲಿ

ವಾಸವಿದ್ದರು ಎಂದರೆ ಸರಿಯಲ್ಲ. ಆರೋಪಿ 4 ಮತ್ತು 5 ರವರುಗಳು ಬೆಂಗಳೂರಿನಲ್ಲಿ ವಾಸವಾಗಿದ್ದರು ಎಂದರೆ ಸರಿ. ನಂತರ ಸಾಕ್ಷಿ ಮುಂದುವರೆದು, ಚಾ.ಸಾ. 1 ರವರಿಗೆ ಕಿರುಕುಳ ನೀಡುತ್ತಿದ್ದರು ನುಡಿಯುತ್ತಾರೆ. ಮದ್ದೂರಿನ ಶಿವಪುರದಲ್ಲಿ ಆರೋಪಿ 1 ಮತ್ತು ಚಾ.ಸಾ. 1 ರವರು ಮಾತ್ರ ವಾಸಿಸುತ್ತಿದ್ದರು ಎಂದರೆ ಸರಿಯಲ್ಲ. ಆರೋಪಿ 1 ರವರು ಕೆ ಎಂ ದೊಡ್ಡಿಗೆ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಶಿವಪುರದಲ್ಲಿರುವ ಆರ್ ಸಿ ಸಿ ಮನೆಯನ್ನು ಬರೆಸಿಕೊಡುವಂತೆ, ಚಾ.ಸಾ. 1 ರವರು ಆರೋಪಿತರ ಮೇಲೆ ಒತ್ತಡ ಹಾಕುತ್ತಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಆರೋಪಿತರು ಒಪ್ಪದೇ ಇದ್ದಾಗ ನೀವು ಚಾ,ಸಾ. 1 ರವರಿಂದ ಸುಳ್ಳು ದೂರನ್ನು ಕೊಡಿಸಿರುತ್ತೀರಿ ಎಂದರೆ ಸರಿಯಲ್ಲ.

ಚಾ.ಸಾ. 1 ರವರು ಪೋಲೀಸರಿಗೆ ದೂರು ನೀಡಿದ ಸಂದರ್ಭದಲ್ಲಿ ನಾವು ಮದ್ದೂರಿಗೆ ಬೆಳಗ್ಗೆ 10.45 ಗಂಟೆಗೆ ಬಂದಿರುತ್ತೇವೆ. ನಾವು ಬರುವಷ್ಟರಲ್ಲಿ ಚಾ.ಸಾ. 1 ರವರು ಪೋಲೀಸರಿಗೆ ದೂರು ನೀಡಿದ್ದರು. ಮದ್ದೂರಿಗೆ ಬರುವಂತೆ ಚಾ.ಸಾ. 1 ರವರೇ ದೂರವಾಣಿ ಕರೆ ಮಾಡಿ ತಿಳಿಸಿರುತ್ತಾರೆ. ಆರೋಪಿತರು ಚಾ.ಸಾ. 1 ರವರಿಗೆ ವರದಕ್ಷಿಣೆ ಕಿರುಕುಳ ಕೊಟ್ಟಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಾರೆಂದರೆ ಸರಿಯಲ್ಲ. ಏನಾದರೂ ಮಾಡಿ, ಆಸ್ತಿಯನ್ನು ಬರೆಸಿಕೊಳ್ಳುವ ಉದ್ದೇಶದಿಂದ ಆರೋಪಿತರ ವಿರುದ್ದ ಸುಳ್ಳು ದೂರನ್ನು ಕೊಡಿಸಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಎಸಿಜೆ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ